ಕ್ರ. ಸಂ.	ದೇವಾಲಯದ ಹೆಸರು	ಕಾಮಗಾರಿ ಹೆಸರು	ವರ್ಷ	ಮೊತ್ತ
7.	ಶ್ರೀ ಆಂಜನೇಯ ಸ್ವಾಮಿ ದೇ: ಮಂಡಿ ಬ್ಯಾಡರಹಳ್ಳಿ, ಡೊಡ್ಡಬಳ್ಳಾಪುರ	ಜೀರ್ಣೋದ್ಧಾರ	2001-2002	30,000-00
8.	ಶ್ರೀ ವೇಣುಗೋಪಾಲಸ್ವಾಮಿ ದೇ:, ತಪಸೀಹಳ್ಳಿ ಗ್ರಾಮ	ಜೀರ್ಣೋದ್ಧಾರ	2001-2002	20,000-00

ಮುಜರಾಯಿ ದೇವಸ್ಥಾನಗಳಿಂದ ಬರುವ ಆದಾಯ

70 (154) ಶ್ರೀ ಕೃಷ್ಣಪ್ಪ ವಿ. ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್.ಎಸ್. ಘಾಟಿ ಹಾಗೂ ಕನಸವಾಡಿ (ಮಧುರೆ) ಶನಿಮಹಾತ್ಮಸ್ವಾಮಿ ದೇವಸ್ಥಾನಗಳಿಂದ ಕಳೆದ 3 ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು? (ವರ್ಷವಾರು ಮಾಹಿತಿ ಕೊಡುವುದು)

ಆ) ಈ ದೇವಸ್ಥಾನಗಳಿಂದ ಬರುವ ಆದಾಯವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಈ ದೇವಸ್ಥಾನಗಳಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;? ಹಾಗಿದ್ದಲ್ಲಿ, ಇದನ್ನು ಯಾವಾಗ ನಿರ್ಮಿಸಲಾಗುವುದು?

ಈ) ಇದುವರೆಗೂ ತೆಗೆದುಕೊಂಡಿರುವ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳು ಯಾವುವು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ದೊಡ್ಡಬಳ್ಳಾಪುರ ತಾಲ್ಲೂಕು ಶ್ರೀ ಎಸ್.ಎಸ್. ಘಾಟಿ ಹಾಗೂ ಕನಸವಾಡಿ ಶ್ರೀ ಶನಿಮಹಾತ್ಮಸ್ವಾಮಿ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ. ಆದರೆ ಸದರಿ ದೇವಾಲಯಗಳ ಆದಾಯವನ್ನು ಅದೇ ದೇವಾಲಯಗಳ ಅಭಿವೃದ್ಧಿಗೆ ಉಪಯೋಗಿಸಲಾಗುತ್ತದೆ.

ಕಳೆದ 3 ವರ್ಷಗಳ ದೇವಾಲಯಗಳ ಆದಾಯ ವಿವರ ಕೆಳಕಂಡಂತಿದೆ

	1999-2000	2000-2001	2001-2002
1. ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ	46,49,586	57,22,019	71,46,180
2. ಕನಸವಾಡಿ ಶ್ರೀ ಶನಿಮಹಾತ್ಮ ಸ್ವಾಮಿ ದೇವಾಲಯ	1,02,24	1,06,669	1,97,295

ಆ) ಈ ಆದಾಯವನ್ನು ಕೆಳಕಂಡ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಲಾಗಿದೆ.

ಶ್ರೀ ಘಾಟಿ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಮಾಡಲಾಗಿರುತ್ತದೆ.

1. ದೇವಾಲಯದ ಅಲಂಕಾರ ಮಂಟಪ ಗೋಪುರ	ರೂ. 84,900-00
2. ಅಂಗಡಿ ಮಳಿಗೆ 1 ಮತ್ತು 2	ರೂ. 34,500-00

3.	ಅಂಗಡಿ ಮಳಿಗೆ 3 ಮತ್ತು 4	ರೂ. 35,100-00
4.	ಅಂಗಡಿ ಮಳಿಗೆ 5 ಮತ್ತು 6	ರೂ. 34,550-00
5.	ಅಂಗಡಿ ಮಳಿಗೆ 7 ಮತ್ತು 8	ರೂ. 34,200-00
6.	ಪ್ರಸಾದ ಕ್ಯೂಲೈನ್	ರೂ. 55,250-00
7.	ಗೋಪುರಕ್ಕೆ ವರ್ಣ ಲೇಪನ	ರೂ. 46,859-00
8.	ಪಾದರಕ್ಷೆ ಶೆಲ್ಲರ್ ನಿರ್ಮಾಣ	ರೂ. 93,200-00
9.	ಹೊಸ ಅಂಗಡಿ ಮಳಿಗೆಗೆ ವಿದ್ಯುತ್ ಸಂಪರ್ಕ	ರೂ. 38,853-00
10.	ದೇವಾಲಯದ ಗರ್ಭಗುಡಿ ಬಾಗಿಲುಗಳಿಗೆ ಮತ್ತು ಹುಂಡಿಗಳಿಗೆ ಸ್ಕ್ರೀಂ ಅಳವಡಿಸಿವ ಬಗ್ಗೆ	ರೂ. 72,918-00
11.	ದೇವಾಲಯದ ಪ್ರವಾಸ ಮಂದಿರ ಪಕ್ಕ ಗುಂಡುತೋಪಿಗೆ ಕಾಂಪೌಂಡ್	ರೂ. 49,047-00
12.	ದೇವಾಲಯದ ಬಳಿ ಆವರಣ ಎಡ ಭಾಗದಲ್ಲಿ ಸಿದಳು ಒದಗಿಸಲು ಫೈಬರ್ ಶೀಟ್ ಅಳವಡಿಸುವ ಬಗ್ಗೆ	ರೂ. 92,672-00
13.	ದೇವಾಲಯ ಒಳ ಆವರಣ ಎಡ ಭಾಗದಲ್ಲಿ ನೆರಳು ಒದಗಿಸಲು ಫೈಬರ್ ಶೀಟ್ ಅಳವಡಿಸುವ ಬಗ್ಗೆ	ರೂ. 75,724-00
14.	ದೇವಾಲಯದ ಪ್ರವಾಸಿ ಮಂದಿರ ಪಕ್ಕ ನೀರಿನ ಸಂಪ್ ಮತ್ತು ಇದಕ್ಕೆ ಮೀಟರ್ ಅಳವಡಿಸುವ ಬಗ್ಗೆ	ರೂ. 46,852-00
15.	ದೇವಾಲಯದ ಕಲ್ಯಾಣ ಮಂಟಪ ಮುಂಭಾಗ ಲಬೂಲ್ ಸ್ಟೋನ್ ಅಳವಡಿಸುವ ಬಗ್ಗೆ	ರೂ. 4,45,764-00
16.	ಅಡಿಗೆ ಶಾಲೆ ಬೋಜನ ಶಾಖೆ ಮಧ್ಯ ಖಾಲಿ ಜಾಗಕ್ಕೆ ಆರ್.ಸಿ.ಸಿ. ನಿರ್ಮಿಸುವ ಬಗ್ಗೆ	ರೂ. 82,337-00

ಕನಸವಾಡಿ ಶ್ರೀ ಶನಿಮಹಾತ್ಮದೇವಾಲಯದ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದಿಲ್ಲ.

ಇ) ಹೌದು ಬಂದಿದೆ. ಶ್ರೀ ಘಾಟಿ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಸುಲಭ್ ಇಂಟರ್‌ನ್ಯಾಷನಲ್ ಸಂಸ್ಥೆಯವರಿಂದ ಸುಲಭ್ ಶೌಚಾಲಯ ನಿರ್ಮಿಸಲು ರೂ. 9,61,265-00 ಗಳ ಅಂದಾಜುಪಟ್ಟಿ ತಯಾರಿಸಿದ್ದು, ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಶನಿಮಹಾತ್ಮದೇವಾಲಯದ ಶೌಚಾಲಯದ ದುರಸ್ಥಿ ಬಗ್ಗೆ ನ್ಯಾಯಾಲಯ ಅನುಮತಿ ಕೋರಿದ್ದು, ಅನುಮತಿ ನೀಡಿದ ನಂತರ ಶೌಚಾಲಯವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಶ್ನೆ 2 ರ ಉತ್ತರದಲ್ಲಿ ವಿವರಿಸಿರುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಪರವಾನಗಿ ಭೂಮಾಪಕರನ್ನು ನಿಯಾಯಂಗೊಳಿಸುವಿಕೆ

71 (213) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?